ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	349
ಸದಸ್ಯರ ಹೆಸರು	:	ಶ್ರೀ ಎನ್.ಎಸ್.ಬೋಸ್ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	18-07-2019
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿ

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಯಚೂರು ಜಿಲ್ಲೆಯಲ್ಲಿರುವ ಕಾಡ್ಲೂರು, ಆಶಾಪೂರ, ಗ್ರಾಮಗಳಲ್ಲಿ ಹಾಗೂ ಮಾನ್ವಿ ತಾಲ್ಲೂಕಿನಲ್ಲಿರುವ ಹರವಿ ಹಾಗೂ ಅಡವಿ ಅಮರೇಶ್ವರದಲ್ಲಿ 110/11 ಕೆ.ವಿ. ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ರಾಯಚೂರು ಜಿಲ್ಲೆಯ ಕಾಡ್ಲೂರು, ಆಶಾಪುರ ಹಾಗೂ ಮಾನ್ವಿ ತಾಲ್ಲೂಕಿನ ಹರವಿ ಹಾಗೂ ಅಡವಿ ಅಮರೇಶ್ವರ ಗ್ರಾಮದಲ್ಲಿ 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.
<u>ಕಾಡ್ಲೂರು</u>: ಸದರಿ ಉಪ-ಕೇಂದ್ರ ಸ್ಥಾಪಿಸಲು, ಕಾಡ್ಲೂರು ಗ್ರಾಮ ವ್ಯಾಪ್ತಿಯಲ್ಲಿ ಅಗತ್ಯವಿರುವ ಜಮೀನು ಜಿಲ್ಲಾಧಿಕಾರಿಗಳು ರಾಯಚೂರು ರವರಿಂದ ಕವಿಪ್ರನಿನಿಗೆ ಹಂಚಿಕೆಯಾಗಿರುತ್ತದೆ. ಬ್ಲಾಕ್ ಲೆವೆಲ್, ಜಿಯೋಟೆಕ್ ಸರ್ವೆಗಾಗಿ ಹಾಗೂ ಲೈನ್ ಸರ್ವೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.
<u>ಆಶಾಪೂರ:</u> ರಾಯಚೂರು ತಾಲ್ಲೂಕಿನ ಆಶಾಪೂರ ರೋಡ್‌ನಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ನಿರ್ಮಾಣಕ್ಕಾಗಿ ಸರಕಾರಿ ಜಮೀನು ಗುರುತಿಸಲಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
<u>ಹರವಿ:</u> ಹರವಿಯಲ್ಲಿ 110/110 ಕೆ.ವಿ. ಸ್ಥಾಪನೆಗೆ ಅಗತ್ಯವಿರುವ ಭೂಮಿಯನ್ನು ಖರೀದಿಸಲಾಗಿದ್ದು, ಬ್ಲಾಕ್ ಲೆವೆಲ್, ಜಿಯೋಟೆಕ್ ಸರ್ವೆಗಾಗಿ ಹಾಗೂ ಲೈನ್ ಸರ್ವೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.
<u>ಅಡವಿ ಅಮರೇಶ್ವರ</u>: ಅಡವಿ ಅಮರೇಶ್ವರ 110/11 ಕೆ.ವಿ. ವಿದ್ಯುತ್ ಉಪ-ಕೇಂದ್ರದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಆಗಷ್ಟ-2019 ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲು ಕ.ವಿ.ಪ್ರ.ನಿ.ನಿ.ಯು ಉದ್ದೇಶಿಸಿದೆ.</td></tr>
<tr><td>ಆ)</td><td>ರಾಯಚೂರು ಜಿಲ್ಲೆಯಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು?</td><td>ರಾಯಚೂರು ಜಿಲ್ಲೆಯಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಜೂನ್-2019ರವರೆಗೆ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡ ವಿದ್ಯುತ್ ಉತ್ಪಾದನಾ ಘಟಕಗಳಿಂದ ಉತ್ಪಾದನೆಯಾದ ವಿದ್ಯುತ್ತಿನ ಪ್ರಮಾಣದ ವಿವರಗಳನ್ನು ಕೆಳಕಂಡಂತೆ ಒದಗಿಸಲಾಗಿದೆ.
<table>
<tr><th rowspan="2">ವಿದ್ಯುತ್ ಮೂಲ</th><th rowspan="2">ವಿದ್ಯುತ್ ಉತ್ಪಾದನೆ ಪ್ರಮಾಣ (ಮೆ.ವ್ಯಾಗಳಲ್ಲಿ)</th><th>2018-19</th><th>2019-20</th></tr>
<tr><th>ಖರೀದಿಸಿದ ವಿದ್ಯುತ್ ಪ್ರಮಾಣ (ಮಿ.ಯೂ.ಗಳಲ್ಲಿ)</th><th>ಖರೀದಿಸಿದ ವಿದ್ಯುತ್ ಪ್ರಮಾಣ (ಮಿ.ಯೂ.ಗಳಲ್ಲಿ) (ಜೂನ್-19 ವರೆಗೆ - ತಾತ್ಕಾಲಿಕ)</th></tr>
<tr><td>ಕಿರು ಜಲ</td><td>6</td><td>16.05</td><td>0</td></tr>
<tr><td>ಸಕ್ಕರೆ ಕಾರ್ಖಾನೆಗಳು</td><td>5</td><td>22.26</td><td>6.26</td></tr>
<tr><td>ಸೌರ ಶಕ್ತಿ</td><td>2</td><td>3.39</td><td>1.02</td></tr>
<tr><td>ಪವನ ಶಕ್ತಿ</td><td>189.50</td><td>497.83</td><td>125.12</td></tr>
</table></td></tr>
</table>

...2)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ:- ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿತ ಸಾಮರ್ಥ್ಯ 3303 ಮೆ.ವ್ಯಾಗಳನ್ನು ಹೊಂದಿದೆ. ಅವುಗಳು 2 ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮತ್ತು 1 ಸೌರಶಕ್ತಿ ಕೇಂದ್ರವನ್ನು ಹೊಂದಿದೆ. ಅವುಗಳ ಕಳೆದ ವರ್ಷದ ವಿದ್ಯುತ್ ಉತ್ಪಾದನಾ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರಮ ಸಂಖ್ಯೆ	ವಿದ್ಯುದಾಗಾರಗಳು	ಉತ್ಪಾದನಾ ಸಾಮರ್ಥ್ಯ ಮೆ.ವ್ಯಾಗಳಲ್ಲಿ	ಉತ್ಪಾದನೆ 2018–19	ಉತ್ಪಾದನೆ 2019–20 (01.04.2019ರಿಂದ 11.07.2019ರವರೆಗೆ)
1.	ಆರ್‌ಟಿಪಿಎಸ್ ಘಟಕ–1–8	1720	8917.97	3115.83
2.	ವೈಟಿಪಿಎಸ್	1600	791.66	0
3.	ಯಪಾಲ್‌ದಿನ್ನಿ	3	1.601	0.3398
	ಒಟ್ಟು	3303	9711.23	3116.17

ಸಂಖ್ಯೆ: ಎನರ್ಜಿ 67 ಇಬಿಎಸ್ 2019

(ಹೆಚ್.ಡಿ.ಕುಮಾರಸ್ವಾಮಿ)

ಮುಖ್ಯಮಂತ್ರಿ